




## ವೆದರ್ ಅಂಡರ್‌ಗ್ರೌಂಡ್

ಇದು ಆ್ಯಂಡ್ರಾಯ್ಡ್‌ನ ಹವಾಮಾನ ಆ್ಯಪ್. ಹೊರಗೆ ಅಡ್ಡಾಡಲು ಹೊರಡುವಾಗ ಕರಾರುವಾಕ್ಕು ಹವಾಮಾನದ ವಿವರ ನೀಡುತ್ತದೆ. ವಿವಿಧ ಚಾನೆಲ್‌ಗಳು, ಅಂತರ್ಜಾಲ ತಾಣಗಳು ನೀಡುವ ಹವಾಮಾನದ ಅಂಕಿ– ಅಂಶಗಳನ್ನು ತಾಳೆ ಹಾಕಿ ಈ ವರದಿ ನೀಡುತ್ತದೆ. ಬಿಳಿ ಬಣ್ಣದ ಹಿನ್ನೆಲೆಯಲ್ಲಿ ಕಪ್ಪು ಅಕ್ಷರಗಳಲ್ಲಿ ವಿವರ ಕಾಣಿಸುತ್ತದೆ. ನೀವಿರುವ ಪ್ರದೇಶ, ಸಮೀಪ ಇರುವ ಹವಾಮಾನ ವರದಿ ನೀಡುವ ಚಾನೆಲ್, ಸದ್ಯದ ತಾಪಮಾನ, ಕನಿಷ್ಠ ಮತ್ತು ಗರಿಷ್ಠ ಉಷ್ಣಾಂಶ, ಗಾಳಿ ಬೀಸುವ ದಿಕ್ಕು, ವೇಗ, ತೇವಾಂಶ, ಮಳೆ ಬೀಳುವ ಸಾಧ್ಯತೆ – ಈ ಎಲ್ಲವೂ ಆ್ಯಪ್‌ನ ಮುಖ್ಯ ಪುಟದಲ್ಲೇ ಸಿಗುತ್ತವೆ.

## ಫೇಸ್‌ಬುಕ್ ಮೆಸೆಂಜರ್

ಎಸ್‌ಎಂಎಸ್ ಗೆ ಇದು ಪರ್ಯಾಯವಾಗಿ ಕೆಲಸ ಮಾಡುತ್ತದೆ. ಲಕ್ಷಾಂತರ ಬಳಕೆದಾರರಿಗೆ ಸಂಪರ್ಕ ಕಲ್ಪಿಸುತ್ತದೆ. ಜೊತೆಗೆ ಸಂಭಾಷಣೆಯನ್ನು ಹೆಚ್ಚು ತಮಾಷೆಯಾಗಿ, ಆರಾಮವಾಗಿ ಮಾಡಲು ಅನುಕೂಲ ಕಲ್ಪಿಸುತ್ತದೆ. ಎಲ್ಲದಕ್ಕೂ ಪ್ರತ್ಯೇಕ ಆ್ಯಪ್ ಒದಗಿಸುವ ನಿಟ್ಟಿನಲ್ಲಿ ಸಾಮಾಜಿಕ ಜಾಲತಾಣ ಫೇಸ್‌ಬುಕ್ ಸಾಮಾಜಿಕ ಜಾಲತಾಣದ ಮೊಬೈಲ್ ಆ್ಯಪ್ ಅನ್ನು ಈ ಸಂದೇಶವಾಹಕ ಆ್ಯಪ್‌ನಿಂದ ಪ್ರತ್ಯೇಕಿಸಿದೆ. ಅಂದರೆ ಒಂದೇ ಡಿವೈಸ್‌ನಲ್ಲಿ ನೀವು ಎರಡು ಆ್ಯಪ್‌ಗಳನ್ನು ಚಾಲೂ ಇಡಬೇಕಾಗುತ್ತದೆ. ಫೇಸ್‌ಬುಕ್ ಆ್ಯಪ್ ಆಗಿರುವುದರಿಂದ ಇತರ ಬಳಕೆದಾರರನ್ನು ಸಂಪರ್ಕಿಸುವುದು ಸುಲಭ. ಹೀಗಾಗಿ ನೀವು ನಿಮ್ಮ ಕಾಂಟ್ಯಾಕ್ಟ್‌ಗೆ ಸ್ನೇಹಿತರನ್ನು ಮತ್ತೆ ಸೇರಿಸಿಕೊಳ್ಳಬೇಕಾದ ಅಗತ್ಯವಿಲ್ಲ.







## ಲಾಸ್ಟ್ ಪಾಸ್

ಇದು ನಿಮ್ಮ ಎಲ್ಲಾ ಪಾಸ್‌ವರ್ಡ್‌ಗಳ ಮಾಹಿತಿ ಇಟ್ಟುಕೊಂಡು ಹೆಚ್ಚು ಸುರಕ್ಷತೆ ಇರುವ ಪಾಸ್‌ವರ್ಡ್ ಸೃಷ್ಟಿಸಿ ಆನ್‌ಲೈನ್‌ನಲ್ಲಿ ನಿಮಗೆ ಸಂಪರ್ಕ ಕಲ್ಪಿಸುತ್ತದೆ. ಇತ್ತೀಚೆಗೆ ಕೆಲವು ವೆಬ್‌ಸೈಟ್‌ಗಳನ್ನು ಪಾಸ್‌ವರ್ಡ್ ಹ್ಯಾಕ್ ಮಾಡಿ ನೋಡುವ ಬೆಳವಣಿಗೆ ಜಾಸ್ತಿಯಾಗಿದೆ. ಈ ಲಾಸ್ಟ್‌ಪಾಸ್ ಆ್ಯಪ್ ನಿಮ್ಮ ಡೆಸ್ಕ್‌ಟಾಪ್‌ನಲ್ಲಿ ವೆಬ್‌ಸೈಟ್‌ಗಳು ಕೇಳುವ ಅರ್ಜಿಯಲ್ಲಿ ಹೆಸರು, ವಿಳಾಸ, ಫೋನ್ ನಂಬರ್‌ಗಳನ್ನು ಭರ್ತಿ ಮಾಡುವ ಕೆಲಸ ಕೂಡಾ ಮಾಡುತ್ತದೆ. ಅದೇ ರೀತಿ ವಿಂಡೋಸ್ ಫೋನ್‌ನಲ್ಲಿ ನಿಮ್ಮ ಪಾಸ್‌ವರ್ಡ್ ಇರುವ ಭದ್ರತಾ ಕೊಠಡಿಗೆ ಇದು ಸಂಪರ್ಕ ಕಲ್ಪಿಸುತ್ತದೆ. ತ್ವರಿತವಾಗಿ ಲಾಗಿನ್ ಆಗಲು ಬಿಲ್ಟ್‌ಇನ್ ಬ್ರೌಸರ್ ಸೌಲಭ್ಯ ಕೂಡಾ ಒದಗಿಸುತ್ತದೆ.

## ಲಿಯೋಸ್ ಫಾರ್ಚೂನ್

ಇದು ಭೌತಶಾಸ್ತ್ರ ಆಧಾರಿತ ಐಪ್ಯಾಡ್ ಗೇಮ್. ಲಿಯೋ ಎಂಬ ಪಾತ್ರ ನಿಧಿ ಶೋಧನೆಗೆ ಹೊರಡುತ್ತದೆ. ಈ ಆ್ಯಪ್ ಕಥೆಯನ್ನೂ ಹೇಳುತ್ತದೆ. ನೀವು ಸ್ವೈಪ್ ಮಾಡುತ್ತ ಸರಿಯಾದ ಮಾರ್ಗ ತೋರಿಸಬೇಕು. ಇಲ್ಲದಿದ್ದರೆ ಲಿಯೋ ಕುಪ್ಪಳಿಸಿ, ತೇಲುತ್ತ ದಾರಿ ತಪ್ಪುತ್ತದೆ. ನೀವು ದಾರಿ ಹುಡುಕಬೇಕಾದರೆ ಭೌತಶಾಸ್ತ್ರದ ಹಲವು ಸೂತ್ರಗಳ ಆಧಾರಿತ ಸಮಸ್ಯೆಗಳನ್ನು ಬಿಡಿಸಬೇಕಾಗುತ್ತದೆ. ಉದಾಹರಣೆಗೆ ವೇಟ್– ಮೊಮೆಂಟಮ್ ಆಧಾರಿತ ಸಮಸ್ಯೆ.




■ ಎಸ್. ತುಂಬೆ